the districts which are most backward classes. They have been already recognised by Nanjundappa's Commission. A special grant also is accorded. ಅದರ ಜೊತೆಗೆ ಸಮಾಜ ಕಲ್ಯಾಣ ಇಲಾಖೆಯಿಂದ ನಿಮ್ಮ ಜಿಲ್ಲೆಗೆ ಬಹಳಷ್ಟು ಒಳ್ಳೆಯ ರೀತಿಯಿಂದ ಸೇವೆ ಸಲ್ಲಿಸುತ್ತಿದ್ದೇವೆ. ಎರಡನೆಯದಾಗಿ, ಶಾಸಕರಾದ ಆಂಜನೇಯರವರು ಮಾತನಾಡುತ್ತಾ ಹೇಳಿರುವ ಮಾತು ನಿಜ. ಅದರ ಬಗ್ಗೆ ನಾನು ಈಗಾಗಲೇ ತೀರ್ಮಾನ ಕೈಗೊಂಡಿದ್ದೇನೆ. ಸದ್ಯಕ್ಕೆ ಈಗಾಗಲೇ ಕೊರೆದಿರುವ 6318 ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕಾಗಿದೆ. ಮೊನ್ನೆ ಹಣಕಾಸು ಸಚಿವರಾಗಿರುವ ಉಪ ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಿದ್ದು, ಮುಂಬರುವ ಏಪ್ರಿಲ್ ತಿಂಗಳೊಳಗೆ ಅಷ್ಟೂ ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕೆಂದು ನಿರ್ಣಯ ಕೈಗೊಳ್ಳಲಾಗಿದೆಯೆಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

**ಹಾನಗಲ್ ತಾಲ್ಲೂಕಿನಲ್ಲಿ ವಸತಿ ನಿಲಯ ಮಂಜೂರಾತಿ ಬಗ್ಗೆ**

120 (1236) ಶ್ರೀ ಉದಾಸಿ ಸಿ.ಎಂ. (ಹಾನಗಲ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಹಾನಗಲ್ ತಾಲ್ಲೂಕು ಚಿಕ್ಕಾಂಶಿ ಹೊಸೂರು ಗ್ರಾಮದ ಪರಿಶಿಷ್ಟ ಪಂಗಡದವರು ವಸತಿ ನಿಲಯ ಮಂಜೂರಾಗಿದೆಯೇ : ಮಂಜೂರಾಗಿದ್ದರೆ ಅದರ ಮೊತ್ತ ಎಷ್ಟು, ಕೆಲಸ ಯಾವಾಗ ಮಾಡಲಾಗುವುದು ;

ಆ) ಹಾಸ್ಟೆಲ್‌ಗಳನ್ನು ಮಂಜೂರು ಮಾಡುವುದು ಸರ್ಕಾರದ ಪ್ರಸ್ತಾವನೆಯಲ್ಲಿದೆಯೇ :

ಇ) ಹಾನಗಲ್ ತಾಲ್ಲೂಕು ಅರಳೇಶ್ವರ–ಕಾಂಚಿನಗಳೂರ–ಕೂಸನೂರ ಗ್ರಾಮಗಳಲ್ಲಿ ಹಾಸ್ಟೆಲ್ ಪ್ರಾರಂಭ ಮಾಡಲು ಸರ್ಕಾರದ ನೀತಿ ಏನು?

ಶ್ರೀ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು.

ವಿದ್ಯಾರ್ಥಿನಿಲಯ ಕಟ್ಟಡ ಕಾಮಗಾರಿಗೆ ರೂ. 45.00 ಲಕ್ಷಗಳ ಅಂದಾಜು ವೆಚ್ಚಕ್ಕೆ ಕೇಂದ್ರ ಸರ್ಕಾರವು ಅನುಮೋದನೆ ನೀಡಿ ಕೇಂದ್ರದ ಪಾಲಿನಲ್ಲಿ ರೂ. 12.50 ಲಕ್ಷಗಳನ್ನು ಮೊದಲ ಕಂತಾಗಿ ಬಿಡುಗಡೆ ಮಾಡಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ನಿಯಮಗಳನ್ವಯ ಟೆಂಡರ್ ಮೂಲಕ ಏಜೆನ್ಸಿಯವರನ್ನು ನೇಮಿಸಿ ಪ್ರಸಕ್ತ ಸಾಲಿನಲ್ಲಿ ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಆ) 2004–05ನೇ ಸಾಲಿನಲ್ಲಿ ಹೊಸ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸದಿರಲು.

ಇ) ನಿಲುವು ತೆಗೆದುಕೊಳ್ಳಲಾಗಿದೆ.

**ಶ್ರೀ ಸಿ.ಎಂ. ಉದಾಸಿ:** ಮಾನ್ಯ ಅಧ್ಯಕ್ಷರೆ, ಹಾನಗಲ್ ತಾಲ್ಲೂಕು ಚಿಕ್ಕಾಂಶಿ ಹೊಸೂರ ಗ್ರಾಮದ ಪರಿಶಿಷ್ಟ ಪಂಗಡದವರ ವಸತಿ ನಿಲಯ ಕಟ್ಟಡದ ಕಾಮಗಾರಿಗೆ ಕೇಂದ್ರ ಸರ್ಕಾರ ತನ್ನ ಪಾಲಾದ 12.50 ಲಕ್ಷ ರೂಪಾಯಿಗಳಷ್ಟು ಅನುದಾನವನ್ನು ಈಗಾಗಲೇ ಬಿಡುಗಡೆ ಮಾಡಿ ಎಂಟು ತಿಂಗಳಾಗಿದ್ದರೂ ಕಟ್ಟಡ ಕಾಮಗಾರಿ ಕೆಲಸ ಇನ್ನೂ ಪ್ರಾರಂಭಿಸಿಲ್ಲದಿರುವುದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ? ಸದರಿ ಕಟ್ಟಡದ ಕಾಮಗಾರಿ ಕೆಲಸ ಯಾವ ಕಾರಣಕ್ಕಾಗಿ ವಿಳಂಬವಾಗಿದೆ? ಕಟ್ಟಡದ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸುತ್ತೀರಿ? ದಿನಾಂಕ ಗೊತ್ತುಪಡಿಸಿರುವುದನ್ನು

ಹೇಳುತ್ತೀರಾ? ಎಂದು ಕೇಳಬಯಸುತ್ತೇನೆ.

**ಡಾ॥ ವೈ. ನಾಗಪ್ಪ:** ಮಾನ್ಯ ಸಭಾಧ್ಯಕ್ಷರೆ, ಹಾನಗಲ್ ತಾಲ್ಲೂಕು ಚಿಕ್ಕಾಂಶಿ ಹೊಸೂರು ಗ್ರಾಮದಲ್ಲಿ ಪರಿಶಿಷ್ಟ ಪಂಗಡದವರ ವಸತಿ ನಿಲಯವನ್ನು 2000ನೇ ಇಸವಿಯಲ್ಲಿ ಮಂಜೂರು ಮಾಡಲಾಗಿದೆ. ಸದರಿ ವಿದ್ಯಾರ್ಥಿನಿಲಯದ ಕಟ್ಟಡ ಕಾಮಗಾರಿಗೆ 45.00 ಲಕ್ಷ ರೂಪಾಯಿಗಳ ಅಂದಾಜು ವೆಚ್ಚಕ್ಕೆ ಕೇಂದ್ರ ಸರ್ಕಾರ ತನ್ನ ಅನುಮೋದನೆ ನೀಡಿ ಕೇಂದ್ರದ ಪಾಲಿನಲ್ಲಿ 12.50 ಲಕ್ಷ ರೂಪಾಯಿಗಳನ್ನು ಮೊದಲ ಕಂತಾಗಿ ಬಿಡುಗಡೆ ಮಾಡಿದ್ದರೆ, ರಾಜ್ಯ ಸರ್ಕಾರ 15 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ, 1999ರ ನಿಯಮಗಳನ್ವಯ ಈಗ ಟೆಂಡರ್ ಕರೆಯಲಾಗಿದ್ದು, ಅದು ಅಕ್ಸೆಪ್ಟ್ ಆದ ತಕ್ಷಣ ಇದೇ ವರ್ಷದಲ್ಲಿ ವಿದ್ಯಾರ್ಥಿ ನಿಲಯದ ಕಟ್ಟಡ ಕಾಮಗಾರಿಯನ್ನು ಪೂರ್ತಿಗೊಳಿಸುತ್ತೇವೆ.

**ತಡೆ ಹಿಡಿಯಲಾದ ಪ್ರಶ್ನೆಗಳು**

746 ಶ್ರೀ ಶಿವರಾಜ ಸಜ್ಜನರ್ (ಹಾವೇರಿ) ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಪಶುಗಳಿಗೆ ಉಚಿತವಾಗಿ ಹಾಗೂ ರಿಯಾಯಿತಿ ದರದಲ್ಲಿ ಪೂರೈಕೆ ಮಾಡುವ ಲಸಿಕೆಗಳು ಇಲ್ಲಿಯವರೆಗೂ ಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಆ) ಹಾಗಿದ್ದಲ್ಲಿ ಲಸಿಕೆಗಳನ್ನು ಎಂದು ಪೂರೈಕೆ ಮಾಡಲಾಗುತ್ತದೆ ?:

ಶ್ರೀ ಮೆರಾಜುದ್ದೀನ್ ಎನ್ ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು) :

ಅ) – ಬಂದಿರುವುದಿಲ್ಲ –

ಆ) – ಉದ್ಭವಿಸುವುದಿಲ್ಲ –

**ತಡೆಹಿಡಿಯಲಾದ ಪ್ರಶ್ನೆಗಳು**

**ದಿನಾಂಕ 27ನೇ ಜನವರಿ, 2005ರ 3ನೇ ಪಟ್ಟಿಯಿಂದ ತಡೆಹಿಡಿಯಲಾದ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 746**

* **ಶ್ರೀ ಶಿವರಾಜ್ ಸಜ್ಜನವರ್:** ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಆದರೆ 1.1.2005ರಿಂದ ಜಾರಿಗೆ ಬರುವಂತೆ ಜಾನುವಾರುಗಳಿಗೆ ಉಚಿತವಾಗಿ ಕಾಲುಬೇನೆ, ಬಾಯಿಬೇನೆ ಮತ್ತು ರೇಬೀಸ್ ನಿರೋಧಕ ಲಸಿಕೆಗಳನ್ನು ಹೊರತುಪಡಿಸಿ ಉಳಿದವುಗಳನ್ನು ಒದಗಿಸಿದ್ದೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಕಾಲು ಬೇನೆ ಮತ್ತು ಬಾಯಿಬೇನೆ ಹಾಗೂ ರೇಬೀಸ್ ನಿರೋಧಕ ಲಸಿಕೆಗಳನ್ನು ಒದಗಿಸಿದ್ದಾರೋ ಇಲ್ಲವೋ ಎಂಬ ಬಗ್ಗೆ ಇದರಲ್ಲಿ ಸ್ಪಷ್ಟವಾಗಿ ತಿಳಿಸಿಲ್ಲ. ಕಾಲುಬೇನೆ ಮತ್ತು ಬಾಯಿಬೇನೆ ನಿರೋಧಕ ಲಸಿಕೆಗಳಿಗೆ ಶೇಕಡ 75ರಷ್ಟು ಸಹಾಯಧನ ಮತ್ತು ರೇಬೀಸ್ ನಿರೋಧಕ ಲಸಿಕೆಗಳಿಗೆ ಶೇಕಡ 50 ರಷ್ಟು ಸಹಾಯಧನವನ್ನು ರೈತರಿಂದ ವಸೂಲಿ ಮಾಡಬೇಕೆಂದು ಉತ್ತರದಲ್ಲಿ ತಿಳಿಸಿದ್ದಾರೆ. ಆದ್ದರಿಂದ ಈ ಲಸಿಕೆಗಳನ್ನು ಸಂಪೂರ್ಣವಾಗಿ ಉಚಿತವಾಗಿ ಒದಗಿಸಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

**ಶ್ರೀ ಮಿರಾಜುದ್ದೀನ್ ಎನ್. ಪಾಟೇಲ್:** ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ

---

* ಈ ಭಾಷಣವು ಮಾನ್ಯ ಸದಸ್ಯರಿಂದ ಪರಿಷ್ಕರಿಸಲ್ಪಟ್ಟಿದೆ.